# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಬೆಂಗಳೂರು

ಸಂಖ್ಯೆ ಕರಾಸಾ:ಕೇಕ:ಸಂ:ಸಾ: ಸಿ-23: 7656 :14-15 ದಿನಾಂಕ: 04-03-2015

**ಸುತ್ತೋಲೆ ಸಂಖ್ಯೆ : 1270/14-15**
**(ಸಂಚಾರ ಇಲಾಖೆಯಿಂದ ಹೊರಡಿಸಲಾಗಿದೆ)**

ವಿಷಯ: ಘಟಕ/ ಬಸ್ಸು ನಿಲ್ದಾಣ/ ತನಿಖಾದಳಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಗದು ಗುಮಾಸ್ತರು/ ಸಂಚಾರ ನಿಯಂತ್ರಕರು ಹಾಗೂ ಮೇಲ್ವಿಚಾರಕ ವರ್ಗದವರು ಕರ್ತವ್ಯದ ಮೇಲಿದ್ದಾಗ ಅವರ ಬಳಿ ಇರಬೇಕಾದ ವೈಯಕ್ತಿಕ ಹಣದ ಬಗ್ಗೆ.

ಉಲ್ಲೇಖ: 1. ಸುತ್ತೋಲೆ ಸಂಖ್ಯೆ:666, ಸಂ/ಕರಾಸಾ/ಕೇಕ/ಸಂ/ಸಾ/10084, ದಿ:9/3/1995.
2. ಸುತ್ತೋಲೆ ಸಂಖ್ಯೆ:757, ಸಂ/ಕರಾಸಾ/ಕೇಕ/ಸಂ/ಸಾ/6677, ದಿ:8/1/1999.
3. ಸುತ್ತೋಲೆ ಸಂಖ್ಯೆ:777, ಸಂ/ಕರಾಸಾ/ಕೇಕ/ಸಂ/ಕಾ/4800, ದಿ:16/11/1999.
4. ಸುತ್ತೋಲೆ ಸಂಖ್ಯೆ:1236, ಸಂ/ಕರಾಸಾ/ಕೇಕ/ಸಂ/ಸಾ/ಸಿ-23/2869, ದಿ:30/07/2014.

******

ಉಲ್ಲೇಖಿತ ಸುತ್ತೋಲೆ ಸಂಖ್ಯೆ 777/1999 ರಲ್ಲಿ ಘಟಕ/ ಬಸ್ಸು ನಿಲ್ದಾಣ/ ತನಿಖಾದಳಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಗದು ಗುಮಾಸ್ತರು, ಸಂಚಾರ ನಿಯಂತ್ರಕರು ಹಾಗೂ ಮೇಲ್ವಿಚಾರಕ ವರ್ಗದವರು ಕರ್ತವ್ಯ ಮೇಲಿದ್ದಾಗ ಹೊಂದಿರಬಹುದಾದ ವೈಯಕ್ತಿಕ ಹಣದ ಬಗ್ಗೆ ನಿರ್ದೇಶನಗಳನ್ನು ನೀಡಲಾಗಿದೆ. ಪ್ರಸ್ತುತ ಪರಿಸ್ಥಿತಿಯನ್ನು ಪರಿಶೀಲಿಸಿ ನಿಗಧಿಪಡಿಸಲಾಗಿರುವ ವೈಯಕ್ತಿಕ ಹಣವನ್ನು ಹೆಚ್ಚಿಸಿ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

1. **ಘಟಕ: ಬಸ್ಸು ನಿಲ್ದಾಣ: ನಿಯಂತ್ರಣಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ನಗದು ಗುಮಾಸ್ತರು, ಟಿಕೇಟ್ ವಿತರಣಾ ಆಡಿಟ್ ಗುಮಾಸ್ತರು ಹಾಗೂ ಸಂಚಾರ ನಿಯಂತ್ರಕರು:**
   ಅ. ಘಟಕ: ಬಸ್ಸು ನಿಲ್ದಾಣ: ನಿಯಂತ್ರಣಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ನಗದು ಗುಮಾಸ್ತರು, ಟಿಕೇಟ್ ವಿತರಣಾ ಆಡಿಟ್ ಗುಮಾಸ್ತರು ಹಾಗೂ ಸಂಚಾರ ನಿಯಂತ್ರಕರು ತಮ್ಮ ಕರ್ತವ್ಯದ ವೇಳೆಯಲ್ಲಿ ವೈಯಕ್ತಿಕ ಹಣವಾಗಿ ತಮ್ಮ ಬಳಿ ರೂ.**150/-** ಗಳನ್ನು ಮಾತ್ರ ಇಟ್ಟುಕೊಳ್ಳಬಹುದಾಗಿರುತ್ತದೆ.
   ಆ. ಈ ರೀತಿ ತಮ್ಮ ವೈಯಕ್ತಿಕ ಹಣವನ್ನು ನಗದು ಚೀಟಿ ಶಾಖೆಯಲ್ಲಿ ಇಟ್ಟಿರುವಂತಹ ಪುಸ್ತಕದಲ್ಲಿ ನಮೂದಿಸಿ ಸಹಿ ಮಾಡಬೇಕು. ಘಟಕ ವ್ಯವಸ್ಥಾಪಕರು, ಬಸ್ಸು ನಿಲ್ದಾಣ ಮೇಲ್ವಿಚಾರಣಾಧಿಕಾರಿಯವರು ಪ್ರತಿದಿನ ಸದರಿ ಪುಸ್ತಕವನ್ನು ಪರಿಶೀಲಿಸಿ ಸಹಿ ಮಾಡಬೇಕು.
   ಇ. ಒಂದು ವೇಳೆ ನಿಗದಿಪಡಿಸಿದ ಹಣಕ್ಕಿಂತ ಹೆಚ್ಚಿನ ಹಣವನ್ನು ಇಟ್ಟುಕೊಳ್ಳುವ ಸಂದರ್ಭದಲ್ಲಿ ಅಂತಹ ಹೆಚ್ಚಿನ ಹಣವನ್ನು ಘೋಷಿಸಿ ಘಟಕ ವ್ಯವಸ್ಥಾಪಕರ ಗಮನಕ್ಕೆ ತಂದು ಸದರಿ ಹೆಚ್ಚಿನ ಹಣವನ್ನು ತಂದಿರುವ ಉದ್ದೇಶವನ್ನು ಪುಸ್ತಕದಲ್ಲಿ ದಾಖಲಿಸಬೇಕು.
   ಈ. ಈ ರೀತಿ ವೈಯಕ್ತಿಕ ಹಣ ರೂ.1,000/- ಮೀರದಂತೆ ಇರಬೇಕು.
2. **ಘಟಕ: ಬಸ್ ನಿಲ್ದಾಣದ ಎಲ್ಲಾ ಮೇಲ್ವಿಚಾರಕ ಸಿಬ್ಬಂದಿಯವರು**
   ಅ. ಘಟಕ: ಬಸ್ ನಿಲ್ದಾಣಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮೇಲ್ವಿಚಾರಕ ಸಿಬ್ಬಂದಿಯವರು ತಮ್ಮ ಕರ್ತವ್ಯದ ವೇಳೆಯಲ್ಲಿ ವೈಯಕ್ತಿಕ ಹಣವಾಗಿ ತಮ್ಮ ಬಳಿ ರೂ.**300/-** ಗಳನ್ನು ಮಾತ್ರ ಇಟ್ಟುಕೊಳ್ಳಬಹುದಾಗಿರುತ್ತದೆ.
   ಆ. ಈ ರೀತಿ ತಮ್ಮ ವೈಯಕ್ತಿಕ ಹಣವನ್ನು ಬಸ್ಸು ನಿಲ್ದಾಣ ಮೇಲಾಧಿಕಾರಿ/ ಘಟಕ ವ್ಯವಸ್ಥಾಪಕರ ಬಳಿ ಇಟ್ಟಿರುವಂತಹ ಪುಸ್ತಕದಲ್ಲಿ ನಮೂದಿಸಿ ಸಹಿ ಮಾಡಬೇಕು. ಘಟಕ ವ್ಯವಸ್ಥಾಪಕರು, ಬಸ್ಸು ನಿಲ್ದಾಣ ಮೇಲಾಧಿಕಾರಿಯವರು ಪ್ರತಿದಿನ ಸದರಿ ಪುಸ್ತಕವನ್ನು ಪರಿಶೀಲಿಸಿ ಸಹಿ ಮಾಡಬೇಕು.
   ಇ. ಒಂದು ವೇಳೆ ನಿಗದಿಪಡಿಸಿದ ಹಣಕ್ಕಿಂತ ಹೆಚ್ಚಿನ ಹಣವನ್ನು ಇಟ್ಟುಕೊಳ್ಳುವ ಸಂದರ್ಭದಲ್ಲಿ ಅಂತಹ ಹೆಚ್ಚಿನ ಹಣವನ್ನು ಘೋಷಿಸಿ ಘಟಕ ವ್ಯವಸ್ಥಾಪಕರು/ನಿಲ್ದಾಣ ಮೇಲಾಧಿಕಾರಿಗಳ ಗಮನಕ್ಕೆ ತಂದು ಸದರಿ ಹೆಚ್ಚಿನ ಹಣವನ್ನು ತಂದಿರುವ ಉದ್ದೇಶವನ್ನು ಪುಸ್ತಕದಲ್ಲಿ ದಾಖಲಿಸಬೇಕು.
   ಈ. ಈ ರೀತಿ ವೈಯಕ್ತಿಕ ಹಣ ರೂ.1,000/- ಮೀರದಂತೆ ಇರಬೇಕು.
   ಉ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರ(ನಡತೆ ಮತ್ತು ಶಿಸ್ತು) ನಿಯಮಾವಳಿಗಳು 1971 ರ ನಿಯಮಾವಳಿ 9 (5) ರ ರೀತ್ಯ ಘಟಕ/ಬಸ್ ನಿಲ್ದಾಣಗಳಲ್ಲಿ ಕಾರ್ಯನಿರ್ವಹಿಸುವ ಈ ಕೆಳಕಂಡ ನೌಕರರು ಮೇಲ್ವಿಚಾರಕ ಸಿಬ್ಬಂದಿಯಾಗಿರುತ್ತಾರೆ.
      1. ಸಹಾಯಕ ಸಂಚಾರ ನಿರೀಕ್ಷಕ
      2. ಸಂಚಾರ ನಿರೀಕ್ಷಕ
      3. ಸಹಾಯಕ ಸಂಚಾರ ಅಧೀಕ್ಷಕ
      4. ಪಾರುಪತ್ತೇಗಾರ
      5. ಹಿರಿಯ ಕುಶಲಕರ್ಮಿ
      6. ಸಹಾಯಕ ಕಾರ್ಯ ಅಧೀಕ್ಷಕ
      7. ಮೇಲ್ವಿಚಾರಕ(ಲೆಕ್ಕ)
      8. ಅಧೀಕ್ಷಕ(ಲೆಕ್ಕ)
      9. ಮೇಲ್ವಿಚಾರಕ(ಸಿಬ್ಬಂದಿ)

...2-

10. ಅಧೀಕ್ಷಕ(ಸಿಬ್ಬಂದಿ)
11. ಮೇಲ್ವಿಚಾರಕ(ಅಂಕಿ ಅಂಶ)
12. ಅಧೀಕ್ಷಕ (ಅಂಕಿ ಅಂಶ)
13. ಉಗ್ರಾಣಪಾಲಕ
14. ಉಗ್ರಾಣ ಅಧೀಕ್ಷಕ
15. ಗಣಕ ಮೇಲ್ವಿಚಾರಕ
16. ಗಣಕ ಅಧೀಕ್ಷಕ

**3. ತನಿಖಾದಳಗಳಲ್ಲಿ ಕೆಲಸ ನಿರ್ವಹಿಸುವ ಎಲ್ಲಾ ಮೇಲ್ವಿಚಾರಕ ಸಿಬ್ಬಂದಿ ಹಾಗೂ ಚಾಲಕರು:**

ಅ. ಘಟಕ/ವಿಭಾಗೀಯ ತನಿಖಾದಳ/ಕೇಂದ್ರೀಯ ತನಿಖಾದಳಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಮೇಲ್ವಿಚಾರಕ ಸಿಬ್ಬಂದಿಯವರು ಹಾಗು ಜೀಪ್ ಚಾಲಕರು ಕರ್ತವ್ಯದ ವೇಳೆಯಲ್ಲಿ ತಮ್ಮ ಬಳಿ ಪ್ರತಿ ದಿನಕ್ಕೆ (ತನಿಖಾ ಕಾರ್ಯಕ್ರಮದ ದಿನಗಳು) (1) ರಾಜ್ಯದ ಗಡಿಯೊಳಗೆ ನಡೆಸಲಾಗುವ ತನಿಖಾ ಕಾರ್ಯಕ್ರಮಕ್ಕೆ ರೂ.**300/-**ಗಳು ಹಾಗೂ (2) ನೆರೆಯ ರಾಜ್ಯಗಳಲ್ಲಿ ನಡೆಸಲಾಗುವ ತನಿಖಾ ಕಾರ್ಯಕ್ರಮಕ್ಕೆ ರೂ.**600/-** ಗಳನ್ನು ಮಾತ್ರ ಇಟ್ಟುಕೊಳ್ಳಬಹುದಾಗಿರುತ್ತದೆ.

ಆ. ಈ ರೀತಿ ತಮ್ಮ ವೈಯಕ್ತಿಕ ಹಣವನ್ನು ತನಿಖಾ ಕಾರ್ಯಕ್ರಮಕ್ಕೆ ಹೊರಡುವ ಮುನ್ನ ತನಿಖಾ ಸಮನ್ವಯಾಧಿಕಾರಿಯವರಲ್ಲಿ ಇಟ್ಟಿರುವ ಪುಸ್ತಕದಲ್ಲಿ ನಮೂದಿಸಿ ಸಹಿ ಮಾಡಬೇಕು. ತನಿಖಾ ಸಮನ್ವಯಾಧಿಕಾರಿಯವರು ಪ್ರತಿದಿನ ಈ ಪುಸ್ತಕವನ್ನು ಪರಿಶೀಲಿಸಿ ಸಹಿ ಮಾಡಬೇಕು.

ಇ. ಒಂದು ವೇಳೆ ನಿಗದಿಪಡಿಸಿದ ಹಣಕ್ಕಿಂತ ಹೆಚ್ಚಿನ ಹಣವನ್ನು ಇಟ್ಟುಕೊಳ್ಳಬೇಕಾದ ಸಂದರ್ಭದಲ್ಲಿ ಅಂತಹ ಹೆಚ್ಚಿನ ಹಣವನ್ನು ಹಾಗೂ ಸದರಿ ಹಣವನ್ನು ತಂದಿರುವ ಉದ್ದೇಶವನ್ನು ಘೋಷಿಸಿ ತನಿಖಾ ಸಮನ್ವಯಾಧಿಕಾರಿಗಳ ಗಮನಕ್ಕೆ ತಂದು ಪುಸ್ತಕದಲ್ಲಿ ಅವರ ಸಹಿ ಪಡೆಯಬೇಕು.

ಈ. ಈ ನಿರ್ದೇಶನಗಳು ತನಿಖಾ ಕಾರ್ಯದಲ್ಲಿ ಭಾಗವಹಿಸುವ ಎಲ್ಲಾ ಮೇಲ್ವಿಚಾರಕ ಸಿಬ್ಬಂದಿಯವರಿಗೆ ಅನ್ವಯವಾಗುತ್ತದೆ.

ಘಟಕ ವ್ಯವಸ್ಥಾಪಕರು/ಬಸ್ ನಿಲ್ದಾಣದ ಮೇಲ್ವಿಚಾರಕ ಅಧಿಕಾರಿ/ಮೇಲ್ವಿಚಾರಕ ಸಿಬ್ಬಂದಿಗಳ ವೈಯಕ್ತಿಕ ಹಣವನ್ನು ಪರಿಶೀಲಿಸಿ ದೃಢಪಡಿಸಿಕೊಂಡು ಸದರಿ ಕಾರಣಕ್ಕಾಗಿಯೇ ಇಟ್ಟಿರುವಂತಹ ಪುಸ್ತಕದಲ್ಲಿ ಸಹಿ ಮಾಡಬೇಕು. ಅಲ್ಲದೇ ನಿಗಧಿತ ಹಣಕ್ಕಿಂತ ಹೆಚ್ಚಿನ ಹಣ ಇಟ್ಟುಕೊಳ್ಳಬೇಕಾದ ಸಂದರ್ಭದಲ್ಲಿ ಅಂತಹ ಸಂದರ್ಭ ಮತ್ತು ಕಾರಣವನ್ನು ಪರಿಶೀಲಿಸಿ ದೃಢಪಡಿಸಿಕೊಂಡು ಅನುಮತಿ ನೀಡಿ ತಮ್ಮ ಬಳಿ ಇರುವ ಪುಸ್ತಕದಲ್ಲಿ ಸಹಿ ಮಾಡಬೇಕಾಗಿರುತ್ತದೆ. ಇಂತಹ ಹೆಚ್ಚಿಗೆ ಹಣ ಕ್ರಮ ಸಂಖ್ಯೆ 1 (ಈ), 2(ಈ) ರಲ್ಲಿ ತಿಳಿಸಿರುವ ಮಿತಿಯನ್ನು ಮೀರಬಾರದು.

ಎಲ್ಲಾ ಘಟಕ ವ್ಯವಸ್ಥಾಪಕರು/ಬಸ್ ನಿಲ್ದಾಣಗಳ ಮೇಲ್ವಿಚಾರಕರು/ತನಿಖಾ ಸಮನ್ವಯಾಧಿಕಾರಿಗಳಿಗೆ ತಿಳಿಸುವುದೇನೆಂದರೆ, ಮೇಲಿನ ನಿರ್ದೇಶನಗಳನ್ನು ಉಲ್ಲಂಘನೆ ಮಾಡಿದಲ್ಲಿ ಅದನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಪಟ್ಟವರೆಲ್ಲರ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗುವುದು.

ಸುತ್ತೋಲೆ ಸಂಖ್ಯೆ **777/1999,** ದಿನಾಂಕ 16/11/1999 ರಲ್ಲಿನ ನಿರ್ದೇಶನಗಳನ್ನು ಹಿಂಪಡೆಯಲಾಗಿದೆ.

ಈ ಸುತ್ತೋಲೆಯ ಸೂಚನೆಗಳು ದಿನಾಂಕ **01/04/2015** ರಿಂದ ಜಾರಿಗೆ ಬರುತ್ತವೆ. ಸುತ್ತೋಲೆ ಸ್ವೀಕರಿಸಿದಕ್ಕೆ ಸ್ವೀಕೃತಿ ಮತ್ತು ಅನುಸರಣಾ ವರದಿ ನೀಡುವುದು.

ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು :

ವ್ಯವಸ್ಥಾಪಕ ನಿರ್ದೇಶಕರು, ಬೆಮಸಾಸಂ/ವಾಕರಸಾಸಂ/ಈಕರಸಾಸಂ ರವರಿಗೆ ಮಾಹಿತಿಗಾಗಿ.

ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾನಿ, ಕೇಂದ್ರ ಕಛೇರಿ ರವರ ಮಾಹಿತಿಗಾಗಿ.

ಮುಖ್ಯ ಸಂಚಾರ ವ್ಯವಸ್ಥಾಪಕರು ಬೆಮಸಾಸಂ/ವಾಕರಸಾಸಂ/ಈಕರಸಾಸಂ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿಗಳು, ಕರಾರಸಾನಿರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಉಪಮುಖ್ಯ ಸಂಚಾರ ವ್ಯವಸ್ಥಾಪಕರು(ಕೇಂದ್ರ ತನಿಖಾ ದಳ) ಕ.ರಾ.ರ.ಸಾ.ನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಎಲ್ಲಾ ವಿಭಾಗ ನಿಯಂತ್ರಣಾಧಿಕಾರಿಗಳು, ಕರಾರಸಾನಿರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಹಿರಿಯ/ಆಪ್ತ ಕಾರ್ಯದರ್ಶಿ, ಅಧ್ಯಕ್ಷರು/ಉಪಾಧ್ಯಕ್ಷರು/ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಭ:ಜಾ)/ನಿರ್ದೇಶಕರು(ಸಿ:ಪ) /ಕರಾರಸಾನಿ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.